ಕವಿತೆ



# ಮಣ್ಣು ಕೊಡು

ಹೃದಯ
ಪಡಿಲು ಬಿದ್ದಿದೆ

ಒಂದು ಮುಷ್ಟಿ
ಮಣ್ಣು ಕೊಡು
ನನ್ನ ಹೃದಯದ ನೆಲದಲ್ಲಿ
ಹಣ್ಣುಗಳ ಬೀಜ ಬಿತ್ತುವೆನು
ಪ್ರೇಮ ಭಾವದ ಒಸರಲ್ಲಿ
ಬೇರೂರಿ ಮೊಳೆತು ಗಿಡ ಮರವಾಗಿ
ಪ್ರಾಣವಾಯು ಬೆಳಕು ಹೀರಿದ
ಮೊಗ್ಗುಗಳ ಗೊಂಚಲುಗಳು
ತುಟಿಯರಳಿಸಿ ನಕ್ಕಾಗ ಬೀರುವ
ಗಂಧದಲಿ ಮೈದುಂಬಿ
ಚಿಟ್ಟೆ ಜೇನು ಉದ್ದ ಕೊಕ್ಕಿನ ಪುಟಾಣಿ ಮಧುಹಕ್ಕಿಗಳು
ಮಕರಂದ ಹೀರುತ ಹೊರಳಾಡಲಿ
ಒಂದೇ ಒಂದು ಮುಷ್ಟಿ
ಮಣ್ಣು ಕೊಡು ನನಗೆ
ಹೃದಯದ ನೆಲವ ಸಿಮೆಂಟು
ಕಾಂಕ್ರಿಟ್‌ನಿಂದ ಕಾಪಿಡಲು

ಹೂವುಗಳು ಕಾಯಿಗಳಾಗಿ
ಕಾಯಿಗಳು ಹಣ್ಣುಗಳಾಗಿ
ಶುಕ ಪಿಕ ಅಳಿಲು ವಾನರ
ಮಿಕ ಪಕ್ಷಿ ಸಂಕುಲ
ನನ್ನ ಹೃದಯದ ಮರಗಳಲ್ಲಿ
ಕಿಚಿಪಿಚಿಗುಡುತ್ತ ತಿಂದು
ನಲಿದಾಡಲಿ
ಯಂತ್ರಜಂತ್ರಗಳು ನನ್ನ ಹೃದಯವನ್ನು ಕಿತ್ತು
ರಾಸಾಯನಿಕ ಸಿಂಪಡಿಸಿ
ಬಲವಂತವಾಗಿ ಹಣ್ಣು ಮಾಡಿ
ಅಂಗಡಿಯಲ್ಲಿ ಖರೀದಿಗಿಡುವ ಮುನ್ನ...

ಒಂದು ಮುಷ್ಟಿ ಮಣ್ಣು ಕೊಡು
ಹೃದಯವ ಉತ್ತು ಬಿತ್ತಿ ಬೆಳೆಸಿ
ಪೈರುಗಳು ತಲೆದೂಗಿ
ಹಕ್ಕಿಗಳನ್ನು ಬಳಿ ಕರೆದು
ಮುದ್ದಿಸಲಿ ಭೂಮಿ ತಾಯಿಯಂತೆ

ಒಂದು ಮುಷ್ಟಿ
ಮಣ್ಣು ಕೊಡು
ಕೊನೆಗೊಮ್ಮೆ ಮಣ್ಣಾಗಲು

● **ಕಾತ್ಯಾಯಿನಿ ಕುಂಜಿಬೆಟ್ಟು**

ಕಲೆ: ವಾಗೀಶ ಹೆಗಡೆ

